**Code No. 18 Z**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ತೃತೀಯ ಪತ್ರಿಕೆ

# (ಸೂತ್ರಗಳು ಮತ್ತು ಸಂಕ್ಷೇಪಿಸುವಿಕೆ)

ಜನವರಿ, 2018 ಸಮಯ : 2½ ಗಂಟೆಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

I. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಒಂದಕ್ಕೆ*** ಮಾತ್ರ ಉತ್ತರಿಸಿ : 1 × 15 = 15

1. ಸಂಯುಕ್ತಾಕ್ಷರಗಳ ಉಪಯೋಗವನ್ನು ಉದಾಹರಣೆ ಸಹಿತ ವಿವರಿಸಿ.

***ಅಥವಾ***

2. ಅಂತ್ಯಸರ್ಗವೆಂದರೇನು ? ಯಾವುದಾದರೂ ಎಂಟು ಅಂತ್ಯಸರ್ಗಗಳನ್ನು ಉದಾಹರಣೆ ಸಹಿತ ವಿವರಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಮೂರಕ್ಕೆ*** ಟಿಪ್ಪಣಿ ಬರೆಯಿರಿ : 3 × 5 = 15

(ಅ) ಅಂತ್ಯಪ್ರತ್ಯಯಗಳಲ್ಲಿ ಇಮ್ಮಡಿ ರೇಖಾಕ್ಷರದ ಉಪಯೋಗ

(ಆ) ಸೇರಿಸಿ ಬರೆಯುವ ಸ್ವರಗಳು

(ಇ) ಸಣ್ಣವೃತ್ತದ ಅಂತ್ಯಪ್ರತ್ಯಯಗಳು

(ಈ) ಎಡರೂಪದ "ತ–ದ"

(ಉ) ವರ್ಣ ಪದಗಳು

III. ಈ ಕೆಳಗೆ ನೀಡಿರುವ ಯಾವುದಾದರೂ ***ಐದು*** ಪದಗಳಿಗೆ ಶೀಘ್ರಲಿಪಿ ಸೂತ್ರಗಳೊಂದಿಗೆ ಸಂಕ್ಷಿಪ್ತ ಅಕ್ಷರಗಳನ್ನು ಬರೆಯಿರಿ : 5 × 2 = 10

(ಅ) ಕಸ್ತೂರಿ

(ಆ) ಬಸಪ್ಪ

(ಇ) ಶೃಂಗಾರ

(ಈ) ವಿಶ್ವಕೋಶ

[ Turn over

(ಉ) ವಿಹಾರ

(ಊ) ಇಟ್ಟಿಗೆ

(ಋ) ಮರಗಳಲ್ಲಿ

IV. ಈ ಕೆಳಗಿನ ನೀಡಿರುವ ಪದಗಳಿಗೆ ಸಂಕ್ಷಿಪ್ತ ರೂಪಗಳನ್ನು ಬರೆಯಿರಿ : 5 × 1 = 5

(ಅ) ಸುವರ್ಣ ಮಹೋತ್ಸವ

(ಆ) ವಿಶ್ರಾಂತಿ ವೇತನ

(ಇ) ದೇಶ ಹಿತಚಿಂತಕ

(ಈ) ಕ್ರಿಸ್ತಪೂರ್ವ

(ಉ) ಧೈರ್ಯೋತ್ಸಾಹ

V. ಈ ಕೆಳಗಿನ ನೀಡಿರುವ ಪದಗಳಿಗೆ ಪದಸಮೂಹಗಳನ್ನು ಬರೆಯಿರಿ : 5 × 1 = 5

(ಅ) ನನ್ನ ಮಾತುಗಳನ್ನು ಮುಗಿಸುತ್ತೇನೆ

(ಆ) ಶಾಸನಸಭಾ ಸದಸ್ಯರು

(ಇ) ಆಧುನಿಕ ಸಂಚಾರ ಸೌಲಭ್ಯಗಳು

(ಈ) ಸಲಹಾ ಮಂಡಳಿ

(ಉ) ನಿರುದ್ಯೋಗ ನಿವಾರಣೆ

VI. ಈ ಕೆಳಗೆ ಕೊಟ್ಟಿರುವ ವಿಷಯವನ್ನು ಪರೋಕ್ಷ ವಿಧಾನದಲ್ಲಿ 500 ಅಕ್ಷರಗಳಿಗೆ ಮೀರದಂತೆ ಸಂಕ್ಷೇಪಿಸಿ ಬರೆಯಿರಿ : 50

ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಸಾರಿಗೆ ಸಚಿವರು ಮಂಡಿಸಿದ ಮಸೂದೆಯನ್ನು ಉದ್ದೇಶಿಸಿ ಮಾನ್ಯ ವಿಧಾನ ಪರಿಷತ್ ಸದಸ್ಯರೊಬ್ಬರು ಈ ರೀತಿ ಭಾಷಣ ಮಾಡಿದರು.

ಈಗ ಸಾರಿಗೆ ಇಲಾಖೆಯ ವ್ಯವಸ್ಥೆಯ ಸುಧಾರಣೆಗೆ ಸಂಬಂಧಿಸಿದಂತೆ ತಂದಿರತಕ್ಕಂತಹ ಮಸೂದೆ ಬಗ್ಗೆ ಹೇಳುವುದಾದರೆ, ಸಾರಿಗೆ ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ಇದನ್ನು ವಲಯವಾರು ವಿಭಜನೆಯನ್ನು ಮಾಡುವ ಬಗ್ಗೆ ಹೇಳಿದ್ದಾರೆ. ಈ ಕಾರ್ಯವನ್ನು ಈಗಿನ

ಸಂದರ್ಭದಲಿ ಮಾಡುವುದು ತೀರಾ ಅಗತ್ಯವಿದೆ. ಏಕೆಂದರೆ ಸಾರಿಗೆ ಸಂಸ್ಥೆಯಲ್ಲಿನ ಅದಕ್ಷತೆ ಮತ್ತು ಭ್ರಷ್ಟಾಚಾರದಿಂದಾಗಿ ಸಾರಿಗೆ ಸಂಸ್ಥೆ ಇಂದು ಸೋರಿಕೆ ಸಂಸ್ಥೆಯೆಂಬ ಅಪಖ್ಯಾತಿ ಪಡೆದಿದೆ. ಇನ್ನು ನಗರ ಸಾರಿಗೆಯ ಬಗ್ಗೆ ಹೇಳುವುದಾದರೆ ಸಕಾಲಕ್ಕೆ ಬಸ್ಸುಗಳು ಸಂಚರಿಸದೆ, ಎಷ್ಟೋ ಬಸ್ಸುಗಳು ಬಾರದೆ, ಸಾರ್ವಜನಿಕರಿಗೆ, ಕಚೇರಿಗಳಿಗೆ, ಕಾರ್ಖಾನೆಗಳಿಗೆ ಹೋಗುವ ನೌಕರರಿಗೆ, ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯುಂಟಾಗುತ್ತಿದೆ. ಆದಕಾರಣ ಸರ್ಕಾರದವರು ಬೆಂಗಳೂರು ನಗರದ ಸಾರಿಗೆಯ ಕೆಲವು ಭಾಗಗಳನ್ನಾದರೂ ಖಾಸಗಿಯವರಿಗೆ ಪ್ರಾಯೋಗಿಕವಾಗಿ ನೀಡಬೇಕೆಂದು ಕೋರುತ್ತೇನೆ.

ಸಾರಿಗೆ ಇಲಾಖೆ ಕೇವಲ ತೆರಿಗೆ ವಸೂಲಿ ಮಾಡುವ ಇಲಾಖೆಯಾಗಿದೆ. ಇಂದು ಸುಮಾರು ಇಪ್ಪತ್ತೈದು ಕೋಟಿ ರೂಪಾಯಿಗಳನ್ನು ಹಣ ತೆರಿಗೆ ರೂಪದಲ್ಲೇ ಬರುತ್ತಿದೆ. ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ ಮತ್ತು ಸರ್ಕಾರಕ್ಕೆ ಬರುವ ತೆರಿಗೆ ಆದಾಯವು ಜಾಸ್ತಿಯಾಗಿದೆ. ಆದರೆ ಆ ವಾಹನಗಳು ಸಂಚರಿಸುವ ರಸ್ತೆಗಳು ಬಹಳ ಕೆಟ್ಟುಹೋಗಿವೆ. ಈ ಇಲಾಖೆಗೆ ವಾಹನಗಳ ತೆರಿಗೆಯಿಂದ ಹಣವೇನು ಬರುತ್ತಿದೆ, ಅದನ್ನು ರಸ್ತೆಗಳ ಅಭಿವೃದ್ಧಿಗೆ ಹಾಕಿದರೆ ವಾಹನಗಳನ್ನು ಓಡಿಸುವವರು ಬಹಳ ಸಂತೋಷಪಡುತ್ತಾರೆಂದು ಹೇಳುತ್ತೇನೆ.

ಇನ್ನು ಸಂಚಾರಿ ಪೋಲೀಸಿನವರು ಸಾಯಂಕಾಲದ ಹೊತ್ತು ಗಲ್ಲಿ ಗಲ್ಲಿಯಲ್ಲೂ ಕಾದಿದ್ದು ಆ ರಸ್ತೆಯಲ್ಲಿ ಬರುವ ದ್ವಿಚಕ್ರ ವಾಹನಗಳೇ ಆಗಲಿ, ಕಾರುಗಳೇ ಆಗಲಿ, ಲಾರಿಗಳೇ ಆಗಲಿ ಅವನ್ನು ತಡೆದು ನಿಲ್ಲಿಸಿ ಪರವಾನಗಿ ಇದ್ದರೂ ಸಹ ಇಲ್ಲದ ಹಿಂಸೆಯನ್ನು ಕೊಡುತ್ತಾರೆ. ಆದರೆ ಯಾರ ಹತ್ತಿರ ಪರವಾನಗಿ ಇರುವುದಿಲ್ಲವೋ, ಯಾರು ತೆರಿಗೆ ಕೊಡದೆ ತಪ್ಪಿಸಿಕೊಳ್ಳುತ್ತಿದ್ದಾರೋ, ಅಂತಹವರಿಗೂ ಈ ಪೋಲೀಸಿನವರಿಗೂ ಒಂದು ರೀತಿಯ ನಿಕಟ ಸಂಬಂಧವಿದೆ. ಅವರುಗಳು ನಿರಾತಂಕವಾಗಿ ತಮ್ಮ ವಾಹನಗಳನ್ನು ಓಡಿಸುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಸಾಕಷ್ಟು ಗಮನ ನೀಡಬೇಕು. ಪರವಾನಗಿ ಹೊಂದಿರುವವರನ್ನು ಹಿಂಸಿಸದೆ ಗೌರವಯುತವಾಗಿ ನೋಡುವಂತೆ ಪೋಲೀಸು ಇಲಾಖೆಗೆ ಹೇಳಬೇಕು.

ಇನ್ನು ನಮ್ಮ ರಾಜ್ಯದಲ್ಲಿ ವೈಜ್ಞಾನಿಕವಾಗಿ ರಸ್ತೆ ಸರ್ವೆಯಾಗಿಲ್ಲ. ಇಂದು ರಾಜ್ಯದಲ್ಲಿ ಪ್ರಯಾಣಿಕರ ಅಗತ್ಯಕ್ಕೆ ಬೇಕಾದಷ್ಟು ವಾಹನಗಳಿಲ್ಲ. ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ವಾಹನ ಸಂಚಾರಗಳಿಲ್ಲದೆ ಎಷ್ಟು ತೊಂದರೆಯಾಗುತ್ತಿದೆ ಎಂದು ಹೇಳಲು ನಾನು ವಿಷಾದಪಡುತ್ತೇನೆ. ಕೆಲವು ಬಸ್ಸುಗಳಲಿ ಮಿತಿ ಮೀರಿ ಜನರನ್ನು ತುಂಬಿರುತ್ತಾರೆ. ಮತ್ತೆ ಕೆಲವು ಕಡೆ

ಖಾಲಿ ಬಸ್ಸುಗಳೇ ಸಂಚರಿಸುತ್ತಿರುತ್ತವೆ. ಆದ್ದರಿಂದ ಆ ಬಗ್ಗೆ ಸಂಚಾರ ನಿರೀಕ್ಷಣೆ ಮಾಡಿಸಿ, ಅದರ ಆಧಾರದ ಮೇಲೆ ವಾಹನಗಳನ್ನು ಓಡಿಸಬೇಕೆಂದು ಹೇಳುತ್ತೇನೆ.

ಇನ್ನು ಗುತ್ತಿಗೆಯಾಧಾರಿತ ವಾಹನಗಳು ಏನಿವೆ, ಅವುಗಳ ಪೈಕಿ ಒಳ್ಳೆಯ ವಾಹನಗಳು ಸಹ ಇವೆ. ಇಂದು ಸರ್ಕಾರದ ಹತ್ತಿರ ಸಾಕಷ್ಟು ವಾಹನಗಳಿಲ್ಲ. ಕೇವಲ ಕೆಲವೇ ವಾಹನಗಳು ಒಳ್ಳೆಯ ಸ್ಥಿತಿಯಲ್ಲಿವೆ. ಶೇಕಡಾ 50 ರಷ್ಟು ವಾಹನಗಳು ಹಳೆಯ ಕಾಲದವು. ಅನೇಕ ವಾಹನಗಳಿಗೆ ಬ್ರೇಕ್ ಇಲ್ಲ, ಆಸನಗಳು ಇಲ್ಲ, ಇದರಿಂದಾಗಿ ಅಪಘಾತಗಳು ಸಂಭವಿಸುತ್ತಿರುತ್ತವ. ಪ್ರತಿದಿನವೂ ಚಾಲಕರು ವಾಹನಗಳಿಗೆ ಹತ್ತುವ ಮುನ್ನ ಅವನು ಕುಡಿದಿದ್ದಾನೆಯೇ, ಇಲ್ಲವೇ ಎಂಬುದನ್ನು ಸ್ಥಿರಪಡಿಸಿಕೊಳ್ಳಲು ಒಬ್ಬ ವೈದ್ಯರನ್ನು ನೇಮಿಸಬೇಕು. ಸಾರ್ವಜನಿಕ ವಾಹನಗಳಲ್ಲಿ ಬೀಡಿ, ಸೀಗರೇಟುಗಳನ್ನು ಸೇದುವುದನ್ನು, ಮದ್ಯಪಾನ ಮಾಡುವುದನ್ನು ಸಹ ಖಂಡಿತವಾಗಿಯೂ ನಿಷೇಧಿಸಬೇಕು. ಈ ಕ್ರಮಗಳನ್ನೆಲ್ಲಾ ಜಾರಿಗೆ ತಂದರೆ ಅಪಘಾತಗಳ ಸಂಖ್ಯೆ ಕಡಿಮೆಯಾಗಬಹುದು.

ಇನ್ನು ಬಸ್ ಷೆಲ್ಟರ್ ಬಗ್ಗೆ ಹೇಳುವುದಾದರೆ ಷೆಲ್ಟರ್ ಇಲ್ಲದೆ ಮಳೆ ಬಂದರೂ ಕೂಡ ಬಸ್ ನಿಲ್ದಾಣದಲ್ಲಿ ನಿಂತಿರುತ್ತಾರೆ. ಯಾವ ಬಸ್ ನಿಲ್ದಾಣಗಳಿಗೆ ಹೋದರೂ ಸರಿಯಾದ ಶೌಚಾಲಯಗಳಿಲ್ಲ. ಆದ್ದರಿಂದ ದೊಡ ದೊಡ್ಡ ಬಸ್ ನಿಲ್ದಾಣಗಳಲ್ಲಿ ಆಧುನಿಕ ರೀತಿಯಲ್ಲಿ ಸಾರ್ವಜನಿಕ ಶೌಚಾಲಯಗಳು, ನೀರಿನ ವ್ಯವಸ್ಥೆ, ಉಪಹಾರ ಗೃಹಗಳು ಹಾಗೂ ಮಹಿಳೆಯರ ತಂಗುವ ಕೊಠಡಿಗಳನ್ನು ಕಟ್ಟಿಸಬೇಕು.

ಕೊನೆಯದಾಗಿ, ಸರ್ಕಾರಿ ವಾಹನಗಳ ಸಿಬ್ಬಂದಿ ಬಗ್ಗೆ ಹೇಳಬೇಕೆಂದರೆ, ಈ ಸರ್ಕಾರಿ ವಾಹನ ಸಿಬ್ಬಂದಿ ವರ್ಗ ಮತ್ತು ನಿರ್ವಾಹಕರ ವರ್ತನೆ ನೋಡಿದರೆ ಅವರೇ ಬಸ್ಸಿನ ಮಾಲೀಕರು ಎಂಬಂತೆ ವರ್ತಿಸುತ್ತಾರೆ. ಪ್ರಯಾಣಿಕರ ಜೊತೆಯಲ್ಲಿ ಸರಿಯಾಗಿ ಸಹಕರಿಸುವುದಿಲ್ಲ. ಸರಿಯಾದ ಸಮಯಕ್ಕೆ ವಾಹನಗಳನ್ನು ಹೊರಡಿಸುವುದಿಲ್ಲ. ಪ್ರಯಾಣಿಕರು ವಿಳಂಬದ ಬಗ್ಗೆ ಪ್ರಶ್ನೆ ಮಾಡಿದರೆ ಅಸಭ್ಯ ವರ್ತನೆಯಿಂದ ನಡೆದುಕೊಳ್ಳುತ್ತಾರೆ. ಆದ್ದರಿಂದ ಈ ಸರ್ಕಾರಿ ವಾಹನಗಳ ಸಿಬ್ಬಂದಿ ವರ್ಗದವರು ಪ್ರಯಾಣಿಕರ ಜೊತೆ ಸೌಹಾರ್ಧತೆಯಿಂದ ನಡೆದುಕೊಳ್ಳುವ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.